‘ನನಗೆ ಗಾಬರಿಯಾಗಿತ್ತು’, ವಿಶಾಲ್ ಸಹ ನಕ್ಕ. ನಂತರ ಗಂಭೀರವಾಗಿ ಹೇಳಿದ, ‘ಆದರೆ ನಮಗೆ ಸಿನಿಮಾದವರಂತೆ ಪ್ರಸಿದ್ಧಿ ಸಿಗುವುದಿಲ್ಲ. ಅವರು ಸೀನಿದರೂ ಪತ್ರಿಕೆಗಳಲ್ಲಿ ಬರುತ್ತದೆ. ನಾವು ಸತ್ತರೂ ಸುದ್ದಿಯಾಗುವುದಿಲ್ಲ’.

‘ನೀವು ಸಿನಿಮಾಕ್ಕೆ ಪ್ರಯತ್ನಿಸಲಿಲ್ಲವೇ?’

‘ಆರಂಭದಲ್ಲಿ ಮಾಡಿದ್ದೆ, ಆದ್ರೆ ಉಪಯೋಗವಾಗಲಿಲ್ಲ. ಆಗ ನನಗೆ ನಾನು ಥಿಯೇಟರ್‌ಗೆ ಸಂಬಂಧಿಸಿದ ವ್ಯಕ್ತಿ, ನಾನು ಅಲ್ಲಿಯೇ ಇರಬೇಕು ಎಂದು ಅರ್ಥವಾಯಿತು.’

‘ಮತ್ತೆ ಸಿನಿಮಾದವರನ್ನು ನೋಡಿ ಏಕೆ ಅಸೂಯೆಪಡ್ತೀರ?’

‘ಅಸೂಯೆಪಡಲ್ಲ, ಸಿನಿಮಾದಲ್ಲಿ ಕೆಟ್ಟ ಅಭಿನಯಕ್ಕೂ ಹೊಗಳಿಕೆ ಸಿಗುತ್ತೆ, ಆದ್ರೆ ನಮ್ಮನ್ನು ಯಾರೂ ಕೇಳಲ್ಲ ಅಂತ ದುಃಖವಾಗುತ್ತೆ’, ವಿಶಾಲ ಮತ್ತೆ ಬೇಸರದಿಂದ ಹೇಳಿದ.

‘ಥಿಯೇಟರ್ ಬಿಟ್ಬಿಡಿ’ ಎಂದೆ.

‘ಬಿಡಲಾರೆ. ಅಲ್ಲಿ ನಟನೆ ಮಾಡದಿದ್ದರೆ ಚಡಪಡಿಕೆ ಶುರುವಾಗುತ್ತೆ’ ವಿಶಾಲ್ ವ್ಯಗ್ರನಾದ.

‘ಇನ್ನು ನಾನು ಹೋಗ್ಬೇಕು, ತಡವಾಗಿದೆ’, ಅಷ್ಟರಲ್ಲಿ ನಾವು ದೋಸೆ ತಿಂದಿದ್ದೆವು, ಕಾಫಿಯನ್ನೂ ಕುಡಿದಿದ್ದೆವು. ವೇಟರ್ ವಿಶಾಲನೆದುರು ಬಿಲ್ ಇಟ್ಟಿದ್ದ. ವಿಶಾಲ್ ಬಿಲ್ ಹಣವನ್ನು ಪ್ಲೇಟಿನಲ್ಲಿಟ್ಟು ಹೇಳಿದ, ‘ನಿಮ್ಮ ಹತ್ರ ಮಾತಾಡಿ ಖುಷಿಯಾಯ್ತು’.

‘ನನಗೂ ಖುಷಿಯಾಯ್ತು’. ಆದರೆ ಇದು ಸಂಪೂರ್ಣ ನಿಜವಾಗಿರಲಿಲ್ಲ. ನಾನು ಯೋಚಿಸಿದಷ್ಟು ನನಗೆ ಸಂತೋಷವಾಗಿರಲಿಲ್ಲ. ನನಗೆ ಅರಿವಿಲ್ಲದ ಜಗತ್ತಿನ ಬಗ್ಗೆ ನಾವು ಮಾತನಾಡಿದ್ದೆವು. ಆದರೂ ವಿಶಾಲ್ ಇದುವರೆಗೆ ಪರಿಚಿತರಾದವರಿಗಿಂತ ಭಿನ್ನನಾಗಿ ಕಂಡ. ಅವನನ್ನು ಮತ್ತೆ ಭೇಟಿಯಾಗಬಹುದು ಎಂದು ಯೋಚಿಸಿದೆ.

ವಿಶಾಲನನ್ನು ಮೂರನೆಯ ಬಾರಿ ಭೇಟಿಯಾದೆ, ನಾಲ್ಕನೆಯ ಬಾರಿಯೂ ಭೇಟಿಯಾದೆ. ನಂತರ ನಾವು ಸಾಮಾನ್ಯವಾಗಿ ಭೇಟಿಯಾಗುತ್ತಿದ್ದೆವು. ನಾವು ರೆಸ್ಟೋರೆಂಟಿನಲ್ಲಿಯೇ ಭೇಟಿಯಾಗುತ್ತಿದ್ದವು. ನಮ್ಮ ಮಾತುಕತೆಯ ಅವಧಿ ನಿಮಿಷಗಳಿಂದ ಹಿಡಿದು ಗಂಟೆಗಳವರೆಗೆ ಬದಲಾಯಿತು. ನಾನು ಅವನನ್ನು ಭೇಟಿಯಾದಷ್ಟೂ ಅವನನ್ನು ಹೆಚ್ಚು ಅರಿಯುತ್ತಾ ಹೋದೆ. ಅವನು ಒಳ್ಳೆಯ ಮನುಷ್ಯನೆಂದು ಅನ್ನಿಸಿತು. ಅವನಿಗೆ ಅವನ ಹೆಂಡತಿಯೊಂದಿಗೆ ಹೊಂದಾಣಿಕೆಯಾಗುತ್ತಿರಲಿಲ್ಲ, ಇದರಿಂದ ನನಗೇನು ಆಗಬೇಕಿದೆ? ನಾನೆಲ್ಲಿ ಅವನನ್ನು ಮದುವೆಯಾಗಬೇಕಿದೆ? ನನ್ನ ಮತ್ತು ವಿಶಾಲನ ನಡುವೆ ನಾಟಕಗಳ ಬಗ್ಗೆ ಹಿಂದಿನಂತೆಯೇ ಚರ್ಚೆಯಾಗುತ್ತಿತ್ತು. ಒಮ್ಮೆ ಅವನು ಕಾಳಿದಾಸನನ್ನು ಆಧರಿಸಿ ಮೋಹನ್ ರಾಕೇಶ್ ಅವರು ಬರೆದ ‘ಆಷಾಢದ ಒಂದು ದಿನ’ ನಾಟಕದ ಕಥೆಯನ್ನು ಹೇಳಿದ. ಅದು ನನ್ನದೇ ಕಥೆ ಎಂದು ಅನ್ನಿಸಿತು. ಮತ್ತೊಂದು ದಿನ ಒಂದು ಪೌರಾಣಿಕ ಕಥೆಯ ಬಗ್ಗೆ ಹೇಳಿದ.



‘ಈಗ ನೀವು ಹೇಳಿ, ನಾನು ಇದರ ನಟಿಯನ್ನು ಆಧುನಿಕ ಮೌಲ್ಯಗಳೊಂದಿಗೆ ಹೇಗೆ ಜೋಡಿಸಬೇಕು?’ ವಿಶಾಲ ಕೇಳಿದ.

‘ಮೊದಲು ನೀವು ಕಥೆಯನ್ನು ಹೇಳಿ’ ಎಂದೆ.

‘ಕೇಳಿ, ಹಿಂದಿನ ಕಾಲದಲ್ಲಿ ಪ್ರತಿಷ್ಠಾನಪುರ ಎಂಬಲ್ಲಿ ಕೌಶಿಕನೆಂಬ ಬ್ರಾಹ್ಮಣನಿದ್ದ. ಅವನದು ಉಗ್ರ ಸ್ವಭಾವವಾಗಿತ್ತು. ಅವನು ಕುಷ್ಠ ರೋಗದಿಂದ ನರಳುತ್ತಿದ್ದ. ಅವನ ಹೆಂಡತಿ ಶಾಂಡಿಲಿಯಾಗಿದ್ದಳು. ಅವಳು ತನ್ನ ಪತಿಗೆ ವಿರುದ್ಧವಾಗಿ ಕೋಮಲ ಸ್ವಭಾವವನ್ನು ಹೊಂದಿದ್ದಳು. ಅವಳು ಸಹೃದಯಿಯಾಗಿದ್ದು, ಸುಂದರವಾಗಿದ್ದಳು...’

‘ಮಹಿಳೆಯರೇ ಹೀಗೆ’ ಅವನ ಮಾತನ್ನು ತಡೆದೆ.

‘ಎಲ್ಲರೂ ಅಲ್ಲ... ಮುಂದಕ್ಕೆ ಕೇಳಿ’.

‘ವಿವಾಹದ ನಂತರ ಶಾಂಡಿಲಿಗೆ ತನ್ನ ಪತಿಯ ವಾಸ್ತವಿಕತೆ ತಿಳಿಯಿತು. ಆಗ ಅವಳು ತನ್ನ ಪತಿಯೊಂದಿಗೆ ವಿಮುಖಳಾಗುವುದಕ್ಕೆ ಪ್ರತಿಯಾಗಿ ತನ್ನ ಪತಿಯ ಸೇವೆಯನ್ನು ನಿಷ್ಠೆಯಿಂದ ಮಾಡಲಾರಂಭಿಸಿದಳು. ಆದರೂ ಕೌಶಿಕನ ಸ್ವಭಾವದಲ್ಲಿ ಯಾವುದೇ ಬದಲಾವಣೆ ಕಾಣಬರಲಿಲ್ಲ. ಅವನು ಮಾತು ಮಾತಿಗೂ ಶಾಂಡಿಲಿಯನ್ನು ಗದರಿಸುತ್ತಿದ್ದ, ಗೇಲಿ ಮಾಡುತ್ತಿದ್ದ. ಅವಳನ್ನು ಸತಾಯಿಸಲು ಉಪಾಯ ಹುಡುಕುತ್ತಿದ್ದ. ಆದರೂ ಶಾಂಡಿಲಿ ತನ್ನ ಪತಿಯ ದುರ್ವ್ಯವಹಾರವನ್ನು ಶಾಂತಿಯಿಂದ ಸಹಿಸುತ್ತಿದ್ದಳು’.

‘ಟ್ರಾಜೆಡಿ ಅಂದರೆ ಇದೇ ಆಗಿದೆ. ಮಹಿಳೆಯರನ್ನು ಇಂಥ ಕಥೆಗಳ ಮೂಲಕ ಪತಿಯ ಸೇವೆಯನ್ನು ಮಾಡಬೇಕೆಂದು ಪಾಠ ಮಾಡಲಾಗುತ್ತದೆ’, ನಾನು ತಡೆದುಕೊಳ್ಳಲಾಗದೆ ಟಿಪ್ಪಣಿ ಮಾಡಿದೆ.

‘ಮುಂದೆ ಕೇಳಿ’

‘ಸರಿ, ಹೇಳಿ’

‘ಒಮ್ಮೆ ಕೌಶಿಕ ಕಾಯಿಲೆ ಬಿದ್ದ. ಶಾಂಡಿಲಿ ಅವನನ್ನು ವೈದ್ಯರ ಬಳಿಗೆ ಕರೆದೊಯ್ದಳು. ವೈದ್ಯರು ಅವನನ್ನು ಪರೀಕ್ಷಿಸಿ ಔಷಧ ಕೊಟ್ಟರು. ವೈದ್ಯರ ಮನೆಯಿಂದ ಬರುವಾಗ ಕೌಶಿಕನ ದೃಷ್ಟಿ ವೇಶ್ಯೆಯೊಬ್ಬಳ ಮೇಲೆ ಬಿತ್ತು. ಆಗ ಅವನ ಮನಸ್ಸಿನಲ್ಲಿ, ಈ ವೇಶ್ಯೆ ನನ್ನ ಹೆಂಡತಿಗಿಂತ ಸುಂದರವಾಗಿದ್ದಾಳೆ, ಇವಳನ್ನು ಅವಶ್ಯವಾಗಿ ಭೇಟಿಯಾಗಬೇಕು ಎಂಬ ಯೋಚನೆ ಬಂತು. ಮನೆಗೆ ಬಂದ ನಂತರ ಕೌಶಿಕ ತನ್ನ ಮನಸ್ಸಿನಲ್ಲಿದ್ದ ಈ ವಿಷಯವನ್ನು ಶಾಂಡಿಲಿಗೆ ಹೇಳಿ, ಆ ವೇಶ್ಯೆಯನ್ನು ಭೇಟಿಯಾಗುವ ಇಚ್ಛೆಯನ್ನು ವ್ಯಕ್ತಪಡಿಸಿದ.

‘ಹೌ ಡೇರ್! ನಾನು ಅವನ ಹೆಂಡತಿಯಾಗಿದ್ದರೆ, ಆ ಕೂಡಲೇ ಅವನ ಕತ್ತು ಹಿಸುಕುತ್ತಿದ್ದೆ’ ಎಂದೆ. ನನಗೆ ಕೌಶಿಕ ಎಂಬ ಹೆಸರಿನ ಆ ಪಾತ್ರ ಸ್ವಲ್ಪವೂ ಹಿಡಿಸಲಿಲ್ಲ.

‘ನೀವು ಕಥೆಯನ್ನು ಕೇಳಬೇಕೋ, ಬೇಡವೋ?’ ವಿಶಾಲ ಸ್ವಲ್ಪ ರೇಗಿದ.

‘ಹೇಳಿ ಹೇಳಿ’ ಎಂದೆ.

‘ಹೂಂ, ನಾನೆಲ್ಲಿದ್ದೆ?’

‘ಕೌಶಿಕ ಆ ವೇಶ್ಯೆಯನ್ನು ಭೇಟಿಯಾಗುವ ಇಚ್ಛೆಯನ್ನು ವ್ಯಕ್ತಪಡಿಸಿದ ಎಂದು ನೀವು ಹೇಳುತ್ತಿದ್ದಿರಿ’ ನಾನು ನೆನಪಿಸಿದೆ.

‘ಯಸ್! ಶಾಂಡಿಲಿ ಕೌಶಿಕನಿಗೆ ಅವನ ಅನಾರೋಗ್ಯ ಮತ್ತು ಉಚಿತಅನುಚಿತದ ಬಗ್ಗೆ ತುಂಬಾ ತಿಳಿ ಹೇಳಿದಳು, ಆದರೆ ಕೌಶಿಕ ಒಪ್ಪಲಿಲ್ಲ. ಅವನು ಶಾಂಡಿಲಿಗೆ ವಿಚಿತ್ರ ಮಾರ್ಗವೊಂದನ್ನು ಸೂಚಿಸಿದ.

‘ಸರಿ, ನಾನು ರೋಗಿ, ನನ್ನ ಕಾಲಿನಿಂದ ನಾನು ನಡೆದು ಹೋಗಲಾರೆ. ನೀನು ನನ್ನನ್ನು ನಿನ್ನ ಹೆಗಲುಗಳ ಮೇಲೆ ಕೂರಿಸಿಕೊಂಡು ಆ ವೇಶ್ಯೆಯ ಮನೆಗೆ ನನ್ನನ್ನು ಕರೆದುಕೊಂಡು ಹೋಗು’.

‘ಸ್ವಾಮಿ, ಇದೇನು ಹೇಳುತ್ತಿದ್ದೀರ?’ ಶಾಂಡಿಲಿ ಕನಸಿನಲ್ಲೂ ತನ್ನ ಪತಿ ಹೀಗೆ ಆಗ್ರಹಿಸುತ್ತಾನೆಂದು ಯೋಚಿಸಿರಲಿಲ್ಲ.

‘ಒಂದು ವೇಳೆ ನೀನು ನನ್ನನ್ನು ಪ್ರೀತಿಸುತ್ತಿದ್ದರೆ ಹಾಗೂ ನೀನು ಪತಿವ್ರತೆಯಾಗಿದ್ದರೆ, ನಾನು ಹೇಳಿದಂತೆ ಕೇಳು. ಇಲ್ಲದಿದ್ದರೆ ನೀನು ಪತಿವ್ರತೆಯಲ್ಲ, ಕಳಂಕಿನಿ ಎಂದು ತಿಳಿಯುತ್ತೇನೆ’, ಕೌಶಿಕ ಚುಚ್ಚುಮಾತಿನಲ್ಲಿ ಹೇಳಿದ.

‘ಹೌ ಶಿಟ್! ತಾನು ಬೇಕಾದರೆ ಏನು ಬೇಕಾದರೂ ಮಾಡಬಹುದು, ಆದರೆ ಮಹಿಳೆ ಆದೇಶವನ್ನು ಪಾಲಿಸದಿದ್ದರೆ, ಅವಳ ಮೇಲೆ ಕೆಸರು ಎರಚಲಾಗುವುದು. ಪುರುಷರು ಹೀಗೇಕೆ ಮಾಡುತ್ತಾರೆ?’ ನಾನು ಮತ್ತೊಮ್ಮೆ ಕೇಳಿದೆ.

‘ನೀವು ಕಥೆಯನ್ನು ಕೇಳಿದ ನಂತರ ಕಾಮೆಂಟ್ ಮಾಡಿ. ಪ್ಲೀಸ್, ಫಾರ್ ಗಾಡ್ ಸೇಕ್’, ವಿಶಾಲ ಕೈ ಮುಗಿದು ಹೇಳಿದ.

‘ಸಾರಿ, ಸಾರಿ, ಎಗೇನ್ ಸಾರಿ. ನಾನೀಗ ಮೌನವಾಗಿರುತ್ತೇನೆ’, ನಾನು ಅವನಿಗೆ ಸಮಾಧಾನ ಹೇಳಿದೆ.

‘ಓ.ಕೆ.! ಮುಂದೆ ಕೇಳಿ, ಕೌಶಿಕನ ಮಾತು ಕೇಳಿ ಶಾಂಡಿಲಿ ಧರ್ಮ ಸಂಕಟಕ್ಕೀಡಾದಳು. ಒಂದು ವೇಳೆ ಅವಳು ಪತಿಯ ಮಾತನ್ನು ಒಪ್ಪಿದರೆ, ಅವಳು ತನ್ನ ಪತಿಯನ್ನು ತನ್ನ ಹೆಗಲ ಮೇಲೆ ಕೂರಿಸಿಕೊಂಡು ವೇಶ್ಯೆಯ ಮನೆಗೆ ಕರೆದೊಯ್ಯಬೇಕು; ಒಂದು ವೇಳೆ ಅವಳು ಪತಿಯ ಮಾತನ್ನು ಕೇಳದಿದ್ದರೆ, ಅವಳ ಪಾತಿವ್ರತ್ಯಕ್ಕೆ ಭಂಗ ಬರುವುದು. ಕಡೆಗೆ ಶಾಂಡಿಲಿ ಪತಿಯ ಮಾತಿನಂತೆ ನಡೆದುಕೊಳ್ಳಲು ನಿಶ್ಚಯಿಸಿದಳು’